**SC No. 50/2022**
**PW.-1**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್.ಸಿ. 50/2022**

| | | |
|---|---|---|
| ಸಾಕ್ಷಿದಾರರ ಹೆಸರು | ವಿಜಯ್ ಕುಮಾರ್ | ಪ್ರಮಾಣ ವಚನ ಮಾಡಿದ ದಿನಾಂಕ: 12.11.2025 |
| ತಂದೆಯ/ಗಂಡನ ಹೆಸರು | ರಂಗಸ್ವಾಮಿ | |
| ವಯಸ್ಸು | 26 ವರ್ಷ | |
| ವೃತ್ತಿ | ನಾದಸ್ವರ ಕೆಲಸ | ಪ್ರಾ.ಸಾಃ 01 |
| ವಾಸ ಸ್ಥಳ | ಸುತ್ತೂರು | ಚಾ.ಸಾಃ 01 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನನಗೆ ಚಾಸಾ-6 ರಿಂದ 8 ಗೊತ್ತು ಅವರು ನಮ್ಮ ಊರಿನವರು ಇರುತ್ತಾರೆ. ಅವರುಗಳು ನನ್ನ ಅಕ್ಕಪಕ್ಕದ ಮನೆಯವರು ಇರುತ್ತಾರೆ. ನನಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಗೊತ್ತು.

ದಿನಾಂಕ 11.03.2020 ರಂದು ನಮ್ಮ ಊರಿನ ಪುಟ್ಟಸಿಳ್ಳಯ್ಯ ರವರ ಮಗಳ ಮದುವೆ ಎಂ.ಎಂ. ರಸ್ತೆಯಲ್ಲಿರುವ ರಾಜ್ ಗೋಪಾಲರಾವ್ ರಾಶಂಕರ್ ಕಲ್ಯಾಣ ಮಂಟಪದಲ್ಲಿ ಇತ್ತು. ರಾತ್ರಿ 10.00 ಗಂಟೆ ಸುಮಾರಿಗೆ ನಾನು, ಮನು, ಸ್ವಾಮಿ ಮತ್ತು ನಂದೀಶ ಹೋಗಿದ್ದೆವು. ಮದುಮಗ ವಾಜಮಂಗಲ ಕಡೆಯವರು ಇದ್ದರು. ಆರತಕ್ಷತೆ ಇತ್ತು ಹುಡುಗನ ಕಡೆಯವರು ನವದಂಪತಿಗಳ ಕಡೆಯಿಂದ ಕೇಕ್ ಕಟ್ ಮಾಡಿಸಿ ಹಂಚುತಿದ್ದರು.

ನಾನು ಕೇಕ್ ಹಂಚುತ್ತಿದ್ದವರಿಗೆ ಅಲ್ಲಿ ಕೆಲಸ ಮಾಡುತ್ತಿದ್ದ ಹೆಂಗಸಿನ ಮಗುವಿಗೆ ಕೇಕನ್ನು ಕೊಡುವಂತೆ ಕೇಳಿದೆ ಅದಕ್ಕೆ ಅವರು ನಿನಗೆ ಏಕೆ ಬೇಕು ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದಿದ್ದರು. ನಾನು ಅದಕ್ಕೆ ನನ್ನನ್ನು ಏಕೆ ಬಯ್ಯುತ್ತಿದ್ದೀರಾ ಎಂದು ಕೇಳಿದೆ ಅದಕ್ಕೆ ಅವರು ನಿನ್ನದು ಯಾವ ಊರು ನಿನ್ನ ಫೋನ್ ನಂಬರ್ ಕೊಡು ಹೊರಗಡೆ ಬಾ ವಿಚಾರಿಸಿಕೊಳ್ಳುತ್ತೇನೆ ಎಂದು ಹೇಳಿದ್ದ. ರಾತ್ರಿ 11.00 ಗಂಟೆ ಮದುವೆ ಕಾರ್ಯ ಮುಗಿಸಿಕೊಂಡು ಆ ಕಲ್ಯಾಣ ಮಂಟಪದ ಎದುರುಗಡೆ ಇರುವ ಮಹದೇಶ್ವರ ದೇವಸ್ಥಾನದ ಹತ್ತಿರ ನಾನು ಮತ್ತು ಚಾಸಾ-6 ರಿಂದ 8 ರವರು ಹೋಗಿದ್ದೆವು. ಅಲ್ಲಿಗೆ ಹೋದ ಮೇಲೆ ಕಲ್ಯಾಣ ಮಂಟಪದ ಒಳಗಡೆ ಗಲಾಟೆ ಮಾಡಿದ್ದ ವ್ಯಕ್ತಿ ಏಕಾಏಕಿ ಬಂದ ಆತನ ಜೊತೆಯಲ್ಲಿ 4-5 ಜನ ಇದ್ದರು ಅವರುಗಳು ನೀನು ಕಲ್ಯಾಣ ಮಂಟಪದ ಒಳಗಡೆ ಏನು ಮಾತನಾಡುತ್ತಿದ್ದಲ್ಲ ಎಂದು ಹೇಳಿ ನನ್ನನ್ನು ಹಿಡಿದುಕೊಂಡು ಬ್ಲೇಡ್ ನಿಂದ ನನ್ನ ಬಲ ಎದೆಯ ಭಾಗ ನನ್ನ ಎಡ ಕುತ್ತಿಗೆಯ ಹತ್ತಿರ ಕುಯ್ದುದಿದ್ದರು. ಅವರುಗಳು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಆ ರೀತಿ ಕುಯ್ದುದಿದ್ದರು. ಆ ನಂತರ ಚಾಸಾ-6 ರಿಂದ 8 ರವರಿಗೂ ಸಹ ಬ್ಲೇಡ್ ನಿಂದ ಕುತ್ತಿಗೆ ಹತ್ತಿರ ಕುಯ್ದುದಿದ್ದರು. ಅಲ್ಲಿ ಸೇರಿದ್ದ ಜನ ಜಗಳವನ್ನು ಬಿಡಿಸಿದ್ದರು. ಆ ನಂತರ ನಮಗೆ ಹೊಡೆದಂತಹವರು ಅಲ್ಲಿಂದ ಹೊರಟು ಹೋಗಿದ್ದರು. ನಮಗೆ ಹೊಡೆದವರ ಬಗ್ಗೆ ವಿಚಾರಣೆ ಮಾಡಲಾಗಿ ನನಗೆ ಬ್ಲೇಡ್ ನಿಂದ ಬಲ ಎದೆಗೆ ಮತ್ತು ಎಡ ಕುತ್ತಿಗೆ ಹತ್ತಿರ ಕುಯ್ದುಂತಹ ವ್ಯಕ್ತಿಯ ಹೆಸರು ಚಂದನ್ ಅಂತ ಗೊತ್ತಾಗಿತ್ತು. 1 ನೇ

ಆರೋಪಿತನ ಕಡೆ ಬ್ಲೇಡ್ ಇತ್ತು . 1 ನೇ ಆರೋಪಿತನೇ ಚಾಸಾ–6 ರಿಂದ 8 ರವರಿಗೂ ಸಹ ಬ್ಲೇಡ್ ನಿಂದ ಹಲ್ಲೆ ಮಾಡಿದ್ದ. ಉಳಿದ ಆರೋಪಿತರು ನಮ್ಮನ್ನು ಹಿಡಿದುಕೊಂಡು ತಳ್ಳಾಡುತ್ತಿದ್ದರು. ಅವರುಗಳ ಹೆಸರು ಮಹೇಶ್, ಗೌತಮ್ ಮತ್ತು ಅಂಕಪ್ಪ ಎಂದು ಗೊತ್ತಾಗಿತ್ತು. ರಕ್ತ ಬಂದಿದ್ದರಿಂದ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಕೆ.ಆರ್. ಆಸ್ಪತ್ರೆಗೆ ಹೋಗಿದ್ದೆವು. ಚಿಕಿತ್ಸೆ ಪಡೆದುಕೊಂಡು ಮನೆಯಲ್ಲಿ ಮಾತನಾಡಿ ನಜರಬಾದ್ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದೆ. ನಾನು ದೂರನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.1** ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು. ನಾನು ದೂರನ್ನು ಕೊಟ್ಟ ಮಾರನೇ ದಿವಸ ಪೊಲೀಸರು ಗಲಾಟೆಯಾದ ಸ್ಥಳ ಕ್ಕೆ ಬಂದಿದ್ದರು ಸ್ಥಳ ವನ್ನು ನಾನೇ ತೋರಿಸಿದ್ದೆ. ಆ ಸ್ಥಳ ದಲ್ಲಿ ಚಾಸಾ–6 ರಿಂದ 8 ರವರು ಇದ್ದರು. ರಂಗಪ್ಪ ಮತ್ತು ಲಿಂಗರಾಜು ಸಹ ಇದ್ದರು. ಪೊಲೀಸರು ಸ್ಥಳ ದಲ್ಲಿ ನಮ್ಮ ಬಟ್ಟೆಗಳಿಗೆ ರಕ್ತದ ಕಲೆಯಾಗಿತ್ತು ಅವುಗಳನ್ನು ನಾವು ಕೊಟ್ಟಿದ್ದೆವು. ಪೊಲೀಸರು ಅವುಗಳನ್ನು ಪಡೆದುಕೊಂಡು ಮಹಜರ್ ಮಾಡಿ ವಶಪಡಿಸಿಕೊಂಡಿದ್ದರು. ನಾನು ಮಹಜರ್ ಗೆ ಸಹಿ ಮಾಡಿದ್ದೆ. ಸಾಕ್ಷಿದಾರರು ಮಹಜರ್ ಅನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.2** ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು. ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ.

( ಸಾಕ್ಷಿದಾರರಿಗೆ ಸೀಲು ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.) ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಪಾಚಿ ಬಣ್ಣದ ಅರ್ಧ ತೋಳಿನ ಟೀ ಶರ್ಟು ನೋಡಿ ಗುರುತಿಸಿದ್ದು ಅದನ್ನು **ಎಂ.ಒ–1** ಎಂದು ಗುರುತಿಸಲಾಯಿತು. ನಾನು ಸ್ವಾಮಿ, ನಂದೀಶ್ ಮತ್ತು ಮನು ಹಾಜರುಪಡಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಬಿಳಿ ಮತ್ತು ಕಪ್ಪು ಗೆರೆ ಯುಳ್ಳ ಚೌಕುಳಿಯಿರುವ ಕಂದು ಬಣ್ಣದ ತುಂಬು ತೋಳಿನ ಶರ್ಟು. ಬೂದು ಬಣ್ಣ ಮತ್ತು ಕಪ್ಪು ಬಣ್ಣದಿಂದ ಕೂಡಿದ ತುಂಬು ತೋಳಿನ ಟೀ ಶರ್ಟು ಮತ್ತು ಕಪ್ಪು ಮತ್ತು ಬಿಳಿ ಬಣ್ಣದ ತುಂಬು ತೋಳಿನ ಶರ್ಟ್ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ **ಎಂ.ಒ–2 ರಿಂದ 4** ಎಂದು ಗುರುತಿಸಲಾಯಿತು. ಮಹಜರ್ ಅನ್ನು ಬೆಳಗ್ಗೆ 9.30 ಯಿಂದ 10.30 ಗಂಟೆಯವರೆಗೆ ಮಾಡಿದ್ದರು. ನಾನು ಬ್ಲೇಡ್ ಅನ್ನು ನೋಡಿದರೆ ಗುರುತಿಸುತ್ತೇನೆ.

( ಸಾಕ್ಷಿದಾರರಿಗೆ ಸೀಲು ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಸಾಕ್ಷಿದಾರರು ಬ್ಲೇಡ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಒ–5 ಎಂದು ಗುರುತಿಸಲಾಯಿತು.

ಆ ದಿನ ಹಲ್ಲೆ ಮಾಡಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು

ನ್ಯಾಯಾಲಯದ ಮುಂದೆ ಇರುವ ಆರೋಪಿ 1, 3 ಮತ್ತು 4 ರವರನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರಿರುವ 1 ನೇ ಆರೋಪಿತನೇ ಆ ದಿನ ಬ್ಲೇಡ್ ನಿಂದ ಹೊಡೆದಿದ್ದ. ಘಟನೆ ಆದಂತಹ ಸ್ಥಳ ದ ಹತ್ತಿರ ವಿದ್ಯುಚಕ್ತಿ ಬೆಳಕು ಇತ್ತು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ :**

ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶ ವನ್ನು ಕೋರಿದ್ದು, ಕಾಲವಕಾಶವನ್ನು ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**